

# ಇದು ಬರಿ ಬಿಸಿಲಲ್ಲೋ ಅಣ್ಣಾ!

■ ಕೆ. ನರಸಿಂಹಮೂರ್ತಿ

**Ah, summer, what power you have to make us suffer and like it.**

**–Russel Baker**

ಬೇಸಿಗೆಯ ತಾಪ ತಾಳದೆ ಮನೆಯ ತಾರಸಿ ಮೇಲೆ ಮಲಗಿದ್ದ ಮಹಿಳೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಘಟನೆ ಕೂಡ್ಲಿಗಿಯಲ್ಲಿ ನಡೆದಿದೆ. ಮಹಿಳೆಯು ಅರಚಾಡಿದ್ದರಿಂದ ದುಷ್ಕರ್ಮಿ ಪರಾರಿಯಾಗಿದ್ದಾನೆ.

–ಬೇಸಿಗೆಯಲ್ಲಿ ಇಂಥವು ಸಹಜ. ನಾಲ್ಕು ವರ್ಷದ ಹಿಂದಿನ ಈ ಸುದ್ದಿ ನೆನಪಾಗಲು ಕಾರಣವಿದೆ. ಆಗ ಏಪ್ರಿಲ್‌ನಲ್ಲಿ ಬಳ್ಳಾರಿಗೆ ವರ್ಗಾವಣೆಯಾಗಿ ಬಂದಾಗಲೂ ಬಿರು ಬೇಸಿಗೆ. ಕನಿಷ್ಠ ಮೂರು ತಿಂಗಳು ಬರೆದ ಸುದ್ದಿಗಳಲ್ಲಿ ಬೇಸಿಗೆ ಕಾಲದ ರಾತ್ರಿ ವೇಳೆಯ ಇಂಥ ಅಪರಾಧ ಸುದ್ದಿಗಳೂ ಇದ್ದವು!

ಮಲಗಿದ್ದ ಮಹಿಳೆಯರಿಗೆ ಗೊತ್ತಾಗದಂತೆ ಸರ ಕದಿಯುವುದು, ಅತ್ಯಾಚಾರಕ್ಕೆ ಯತ್ನಿಸುವುದು, ಮನೆಯವರೆಲ್ಲರೂ ಮೇಲೆ/ಹೊರಗೆ ಮಲಗಿದ್ದ ವೇಳೆಯಲ್ಲಿ ಬಾಗಿಲು ಬೀಗ ಮುರಿದು ಒಳಗಿರುವುದನ್ನು ಕದ್ದು ಸಾಗಿಸುವುದು ಬೇಸಿಗೆಯಲ್ಲಿ ಮಾಮೂಲು. ಇಂಥವು ಪ್ರತಿವರ್ಷ ನಡೆಯುತ್ತಿದ್ದರೂ ಜನ ಮನೆ ಹೊರಗೇ ಮಲಗಿ ಕನಸುಗಳನ್ನು ಹುಡುಕುವುದನ್ನು ನಿಲ್ಲಿಸುವುದಿಲ್ಲ ಎಂಬುದೇ ಸೋಜಿಗ. ಕಳ್ಳರಿಗೆ ಇದು ಸೋಜಿಗವಲ್ಲ; ಅವಕಾಶ. ಆದರೆ ಅವರೂ ಬಿಸಿಲಿನಲ್ಲಿ ಬೆವರಿಳಿಸಿದವರೇ.

ರಾತ್ರಿ ಮಲಗುವ ಮುಂಚೆ ನೆಲಕ್ಕೆ ನೀರು ಚಿಮುಕಿಸಿ ತಣ್ಣಗೆ ಮಾಡುವುದು, ಹಾಸಿಗೆ ಹಾಸಿಕೊಳ್ಳದೆ ಬರಿ ನೆಲದ ಮೇಲೆ ಮಲಗುವುದು, ಏರ್ ಕೂಲರ್‌ಗಳಿಗೆ ಹಾಕುವ ನೀರಿಗೆ ಪರ್‌ಫ್ಯೂಮು ಚಿಮುಕಿಸುವುದು, ಫ್ಯಾನುಗಳನ್ನು ಅತಿ ವೇಗದಲ್ಲಿ ತಿರುಗುವಂತೆ ಮಾಡುವುದು – ಇಲ್ಲಿ ಜನ ನಿದ್ದೆಯನ್ನು, ಕನಸುಗಳನ್ನು ತಂಪಾಗಿ ಇಡಲು ಕಂಡುಕೊಂಡಿರುವ ನಿತ್ಯದ ಮಾರ್ಗೋಪಾಯಗಳು. 'ಕತ್ತಲೆ ದಾರಿ ದೂರ' ಎಂಬ ಮಾತಿನಂತೆಯೇ, ಬೇಸಿಗೆಯ ರಾತ್ರಿಯೂ ಬಲು ಭಾರ.